(ಇಂದು ದಿಃ 09-09-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋದಿಸಲಾಯಿತು)

**ಪಾಟಿ ಸವಾಲು ಃ- ಶ್ರೀ. ವಿ.ವಿ.ರವರಿಂದ ಃ-**

ನನಗೆ ವಾದಿ ಮತ್ತು ಬಕ್ಕಿರೆಡ್ಡಿ ಕುಟುಂಬದ ಮೂಲ ಪುರುಷ ಯಾರು ಎಂದು ಗೊತ್ತಿಲ್ಲ. ವಾದಿ ತಂದೆ ಮತ್ತು ಬಕ್ಕಿರೆಡ್ಡಿ ಸಹೋದರರು ಎಂದರೆ ಸರಿ. ಅವರುಗಳ ತಂದೆ ಹೆಸರು ಬಕ್ಕಿರೆಡ್ಡಿ ಎಂದರೆ ಗೊತ್ತಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ನನ್ನ ತಾತ ಹೆಸರು ಬಕ್ಕಿರೆಡ್ಡಿ ಇರಬಹುದು. ವಾದಿ ತಂದೆ ಮತ್ತು ಬಕ್ಕಿರೆಡ್ಡಿ ದಾವಾ ಸ್ವತ್ತುಗಳನ್ನು ಮತ್ತು ಇತರೆ ಸ್ವತ್ತುಗಳನ್ನು ಒಟ್ಟು ಕುಟುಂಬದ ಸದಸ್ಯರಾಗಿ ಅನುಭವಸುತ್ತಿದ್ದರು ಎಂದರೆ ಗೊತ್ತಿಲ್ಲ. ವಾದಿ ತಂದೆ ಮತ್ತು ಬಕ್ಕಿರೆಡ್ಡಿ ನಡುವೆ ಆಸ್ತಿಗಳ ಭಾಗ ಆಗಿರುತ್ತವೆ. ಯಾವಾಗ ಭಾಗ ಆಗಿರುತ್ತದೆ ಎಂದು ಗೊತ್ತಿಲ್ಲ. ಬಕ್ಕಿರೆಡ್ಡಿಗೆ ಮಕ್ಕಳು ಇರುವುದಿಲ್ಲ. ಬಕ್ಕಿರೆಡ್ಡಿ ಆಸ್ತಿಗಳನ್ನು ವಾದಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಬಕ್ಕಿರೆಡ್ಡಿಯು ತನ್ನ ಭಾಗಾಂಶ ಅಸ್ತಿಗಳನ್ನು ವ್ಯವಸಾಯ ಮಾಡಲೇದ್ದು ವಾದಿಗೆ ನೀಡಿದರು ಮತ್ತು ಉತ್ಪತಿಯಲ್ಲಿ ತಮ್ಮ ಜೀವನಕ್ಕೆ ಭಾಗಾಂಶ ಪಡೆಯುತ್ತಿದ್ದರು ಎಂದರೆ ಸರಿಯಲ್ಲ.

ವಾದಿ ಆನೇಕಲ್ ಭೂ ನ್ಯಾಯಾ ಮಂಡಳಿಗೆ ತನ್ನನು ಗೇಣಿದಾರ ಎಂದು ಗೋಷಿಸಲು ಅರ್ಜಿಸಲ್ಲಿಸಿದ್ದರು ಎಂದರೆ ಸರಿಯಲ್ಲ. ಬಕ್ಕಿರೆಡ್ಡಿ ಮೊಖದಮೇಗೆದ್ದು ಆನೇಕಲ್‌ಗೆ ಬರುತ್ತಿದ್ದರು ಎಂದರೆ ಸರಿಯಲ್ಲ. 19-08-1976 ರಲ್ಲಿ ನನ್ನ ವಿವಾಹ ಆಗಿರುತ್ತದೆ. ವಿವಾಹ ಆದ ನಂತರ ನನ್ನ ಗಂಡನ ಮನೆಯಲ್ಲಿ ವಾಸ ಇದ್ದೇನೆ. ಬಕ್ಕಿರೆಡ್ಡಿ ನ್ಯಾಯಾಲಯಕ್ಕೆ ಬಂದು ಹೋಗುವುದು ಮಾಡುತ್ತಿದ್ದರು. ಅವರು ಭೂನ್ಯಾಯಾಮಂಡಳಿಗೂ ಹಾಜರು ಆಗುತ್ತಿದ್ದರು. ಬಕ್ಕಿರೆಡ್ಡಿಯವರು ಭೂ ನ್ಯಾಯಾಮಂಡಳಿ ಮುಂದೆ ಹೇಳಿಕೆ ಕೋಟ್ಟಿರುತ್ತಾರೆ. ಸದರಿ ಹೇಳಿಕೆಯು ದಿಃ 29-12-1978 ದಿನಾಂಕದದ್ದು ಆಗಿರುತ್ತದೆ. ಸದರಿ ಹೇಳಿಕ್ಕೆ ನಿಪಿ 62 ರಲ್ಲಿ ಇರುತ್ತದೆ. ಬಕ್ಕಿರೆಡ್ಡಿಯವರು ತನ್ನ ಹೇಳಿಕ್ಕೆಯಲ್ಲಿ ಆ ದಿನಾಂಕದದ್ದು ವಾದಿಯೇ ದಾವಾ ಸ್ವತ್ತಿಗಳಲ್ಲಿ ಸ್ವಾದೀನದಲ್ಲಿ ಇರುತ್ತಾರೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ದಿಃ 06-03-

1981 ರಲ್ಲಿ ಭೂನ್ಯಾಯಾಲಯ ಮಂಡಳಿಯು ದಾವಾ ಸ್ವತ್ತುಗಳಿಗೆ ವಾದಿಯೇ ಗೇಣಿದಾರ ಎಂದು ಗೋಷಣೆ ಮಾಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ 5 ಸ್ವತ್ತಿನ ಪಹಣಿಯಲ್ಲಿ ವಾದಿ ಹೆಸರು ನಮೋದಿಯಾತ್ತು ಎಂದರೆ ಸರಿಯಲ್ಲ. ಪಹಣಿಯಲ್ಲಿ ನನ್ನ ಹೆಸರು ಯಾವಾಗಲಿಂದ ನಮೋದಿಯಾಗಿರುತ್ತದೆ ಎಂದು ಗೊತ್ತಿಲ್ಲ. ನನಗೆ ಪಹಣಿಯನ್ನು ನೋಡಿ ಹೇಳಲಾಗುವುದಿಲ್ಲ. ದಾವಾ ಐಟಂ 5 ಸ್ವತ್ತಿಗೆ ವಾದಿ ಹೆಸರಿನಲ್ಲಿ ಪಹಣಿ ಇರುವ ವಿಚಾರ ನನಗೆ ಗೂತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ 5 ಸ್ವತ್ತಿನಲ್ಲಿ ದಾವಾ ಹಾಕುವ ಸಮಯದಲೂ ನಂತರದಲೂ ವಾದಿ ಸ್ವಾದೀನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಬಕ್ಕಿರೆಡ್ಡಿಯವರ ಜೀವಿತ ಕಾಲದಿಂದಲೂ ವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾದೀನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಬಕ್ಕಿರೆಡ್ಡಿಯವರು ವ್ಯವಸಾಯ ಮಾಡುತ್ತಿದ್ದರು.

ಬಕ್ಕಿರೆಡ್ಡಿ ನನ್ನ ದೊಡ್ಡಪ್ಪ. ಬಕ್ಕಿರೆಡ್ಡಿಯವರು ನಾನು ಆತನ ಪತ್ನಿಯ ತಂಗಿ ಮಗಳು ಎಂದು ನನನ್ನು ನೋಡಿಕೊಂಡಿರುತ್ತಾರೆ. ನಾನು ಸರ್ಜಾಪುರದಲ್ಲಿ ವಿದ್ಯಾಭಾಸ ಮಾಡಿರುತ್ತೇನೆ. ನನ್ನ ತಾಯಿ ಊರು ಸೋಮಾಪುರ. ಬಕ್ಕಿರೆಡ್ಡಿ ನನನ್ನು ದತ್ತು ಪಡೆದಿರುದಿಲ್ಲ. ದಿಃ 08-03-1976 ರಂದು ಬಕ್ಕಿರೆಡ್ಡಿಯರು ದಾವಾ ಐಟಂ 5 ಸ್ವತ್ತುನ್ನು ನನಗೆ ದಾನ ಪತ್ರ ಮೂಲಕ ನೀಡಿರುತ್ತಾರೆ. ಬಕ್ಕಿರೆಡ್ಡಿಯವರಿಗೆ ಸ್ವಲ್ಪ ಸ್ವಲ್ಪವಾಗಿ ಓದು ಬರಹ ಬರುತಿತ್ತು. ನಿಡಿ 1 ರಲ್ಲಿ ನನಗೆ ಸ್ವತ್ತು ಸ್ವಾದೀನ ನೀಡಿರುವ ಬಗ್ಗೆ ಬರೆಯಲಾಗಿದ್ದೆ. ನಿಡಿ 1 ರಲ್ಲಿ ಬಕ್ಕಿರೆಡ್ಡಿ ನನಗೆ ದಾನ ನೀಡುತ್ತಿರುವ ಬಗ್ಗೆ ಮತ್ತು ನಾನು ದಾನ ಒಪ್ಪಿಕೊಂಡ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ನಿಡಿ 1 ರ ಸಮಯದಲ್ಲಿ ಭೂ ನ್ಯಾಯಮಂಡಳಿಯಲ್ಲಿ ವಿಚಾರಣೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ನಿಡಿ 1 ರ ಸಮಯದಲ್ಲಿ ಸ್ವತ್ತು ವಾದಿ ಸ್ವಾದೀನದಲ್ಲಿ ಇತ್ತು ಎಂದರೆ ಸರಿಯಲ್ಲ. ಬಕ್ಕಿರೆಡ್ಡಿ ನಿಡಿ 1 ರನ್ನು ಸ್ವ ಇಚ್ಚೇಯಿಂದ ಬರೆದ್ದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಬಕ್ಕಿರೆಡ್ಡಿಗೆ ಮಕ್ಕಳು ಇಲ್ಲದಿರುವುದರಿಂದ ನನ್ನ ತಾಯಿ ಮನೆಯವರು ದಾವಾ ಐಟಂ 5 ಸ್ವತ್ತನ್ನು ಲಪಟಾಯಿಸಲು ನಿಡಿ 1 ನ್ನು ಸುಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಡಿ 1 ರಂತೆ ನಾನು ಯಾವತ್ತು ದಾವಾ ಐಟಂ 5 ಸ್ವತ್ತಿನಲ್ಲಿ ಸ್ವಾದೀನಲ್ಲಿ ಇಲ್ಲ ಎಂದರೆ ಸರಿಯಲ್ಲ.

ಬಕ್ಕಿರೆಡ್ಡಿ ತಮ್ಮ ಜೀವಿತಾ ಅವದಿಯಲ್ಲಿ ಅಸಲು ದಾವಾ ಸಂಖ್ಯೆ: 454/76 ರಂತೆ ದಾವಾ ಹುಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಬಕ್ಕಿರೆಡ್ಡಿಯವರು ನಿಡಿ 1 ರ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಭೂನ್ಯಾಯ ಮಂಡಳಿ ಆದೇಶದ ವಿರುದ್ದ ಬಕ್ಕಿರೆಡ್ಡಿ ಪತ್ನಿ ಮೇಲಮನವಿ ಸಲ್ಲಿಸಿರುತ್ತಾರೆ. ನಾನು ನಿಡಿ 1 ರ ಬಗ್ಗೆ ಮೇಲಮನವಿಯಲ್ಲಿ ನಾನು ಆಗಲ್ಲಿ ಬಕ್ಕಿರೆಡ್ಡಿ ಪತ್ನಿಯಾಗಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 1 ರಂತೆ ಖಾತೆಯು 2005 ತನಕ್ಕ ನನ್ನ ಹೆಸರಿಗೆ ವರ್ಗಾವಣೆಯಾಗಿರುವುದಿಲ್ಲ. ನನ್ನ ಹೆಸರಿಗೆ ಖಾತೆ ವರ್ಗಾವಣೆಯಾವುದ್ದಕ್ಕೆ ಮೊದಲು ಬಕ್ಕಿರೆಡ್ಡಿ ಹೆಸರಿನಲ್ಲಿ ಖಾತೆ ಇತ್ತು. ನಿಡಿ 2 ರಂತೆ ವಾದಿ ಹೆಸರಿನಿಂದ ನನ್ನ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಬಕ್ಕಿರೆಡ್ಡಿ ಹೆಸರಿನ ಖಾತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಐಟಂ 5 ರ ಪೂರ್ವಕ್ಕೆ ತೋಟಿ ಮಾನ್ಯರ ಹೊಲಾ ಇರುತ್ತದೆ. ಪಶ್ಚಿಮಕ್ಕ ವಂದಮುನಿಯಪ್ಪರವರ ಸ್ವತ್ತು, ಉತ್ತರಕ್ಕೆ ಕೃಷ್ಣ ರೆಡ್ಡಿ ಸ್ವತ್ತು, ದಕ್ಷಿಣಕ್ಕೆ ಕೊಡುಗೆ ಜಮೀನು ಇರುತ್ತದೆ. ಪೂರ್ವಕ್ಕೆ ದಿಕ್ಕಿನ ಸ್ವತ್ತನ್ನು ಮಂಜುನಾಥರೆಡ್ಡಿಯವರು ಖರೀದಿ ಮಾಡಿರುತ್ತಾರೆ. ಸದರಿ ಸ್ವತ್ತನ್ನು ಬಸಪ್ಪ ಮತ್ತು ಕೃಷ್ಣಪ್ಪ ಎಂಬುವರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಮಂಜುನಾಥರೆಡ್ಡಿ ಪೂರ್ವ ದಿಕ್ಕಿನ ಸ್ವತ್ತನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಉತ್ತರ ದಿಕ್ಕಿನಲ್ಲಿ ವಾದಿ ಜಮೀನು ಸಹ ಬರುತ್ತದೆ. ದಾವಾ ಐಟಂ 5 ಸ್ವತ್ತಿನಲ್ಲಿ ರಾಗಿ ಬೆಳೆ ಇರುತ್ತದೆ. ಸದರಿ ಸ್ವತ್ತಿನಲ್ಲಿ ಯಾವದೇ ಅಭಿವೃದ್ಧಿಯಾಗಿರುವುದಿಲ್ಲ. ಈ ವರ್ಷವು ರಾಗಿ ಬೆಳೆ ಇರುತ್ತವೆ. ಇದ್ದನ್ನು ಬೀಟ್ಟರೆ ಬೇರೆ ಏನು ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ಕೃಷಿ ಹೊಂಡ ಮಾಡಿಸಿರುವು ನಾನು ನೋಡಿರುವುದಿಲ್ಲ. ನಾನು 2 ವರ್ಷಗಳಿಂದ ದಾವಾ ಸ್ವತ್ತಿನ ಬಳಿ ಹೋಗಿರುವುದಿಲ್ಲ. ನಿಡಿ 1 ರ ದಿನಾಂಕದಿಂದ ನಾನು ದಾವಾ ಐಟಂ 5 ರ ಸ್ವತ್ತಿನಲ್ಲಿ ಸ್ವಾದೀನಲ್ಲಿ ಇರುವುದಿಲ್ಲ ವಾದಿಯೇ ಸ್ವಾದೀನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 1976 ರಿಂದ 2005 ರವರಗೆ ದಾವಾ ಐಟಂ 5 ಸ್ವತ್ತಿಗೆ ಕಂದಾಯ ಪಾವತಿ ಮಾಡಿರುತ್ತೇನೆ. 2005 ರವರಗೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಬಾಕಿ ಇದ್ದವು. ವಾದಿಯು ಬಕ್ಕಿರೆಡ್ಡಿಯ ಅಣ್ಣ ಮಗ ಆಗಿರುವುದರಿಂದ ಗೇಣಿದಾರ

ಎಂದು ಗೋಷಣೆ ಮಾಡಲು ಸಾಧ್ಯವಿಲ್ಲ ಎಂದು ಮಾನ್ಯ ಉಚ್ಚನ್ಯಾಯಲಯದಲ್ಲಿ ತಿರ್ಮಾನಯಾಗಿರುತ್ತದೆ. ನಾನು ಮಾನ್ಯ ಉಚ್ಚನ್ಯಾಯಾಲಯದ ಆದೇಶವನ್ನು ಕಂದಾಯ ಇಲಾಖೆ ಹಾಜರುಪಡಿಸಿ ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. ನಾನು ಬಕ್ಕಿರೆಡ್ಡಿಯ ಕಾನೂನು ಬದ್ದ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ವಾದಿ ಬಕ್ಕಿರೆಡ್ಡಿ ಮತ್ತು ಆತ ಕುಟುಂಬದ ಸದಸ್ಯರ ಹಿತಾಶಕ್ತಿ ವಿರುದ್ದವಾಗಿ ದಾವಾ ಐಟಂ 5 ಸ್ವತ್ತಿನಲ್ಲಿ ಸ್ವಾದೀನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಬಕ್ಕಿರೆಡ್ಡಿಯು ದಾವಾ ಐಟಂ 5 ರ ಸ್ವತ್ತಿನ ಸಾದೀನವನ್ನು ವಾದಿಯಿಂದ ನ್ಯಾಯಾಲಯದ ಮೂಲಕ ಪಡೆದುಕೊಂಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಬಕ್ಕಿರೆಡ್ಡಿಯ ಸ್ವಾತ್ತಿನಲ್ಲಿ ಸ್ವಾದೀನಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ನಾನು ಆಗಲ್ಲಿ 1 ನೇ ಪ್ರತಿವಾದಿ ಯಾಗಲ್ಲಿ ದಾವಾ ಐಟಂ 5 ರ ಸ್ವಾದೀನವನ್ನು ನ್ಯಾಯಾಲಯದಿಂದ ಪಡೆದುಕೊಂಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನೆ ಸದರಿ ಸ್ವತ್ತಿನ ಸ್ವಾದೀನಲ್ಲಿ ಇರುತ್ತೇನೆ ಎಂದು ಹೇಳುತ್ತಾರೆ. ಭೂ ನ್ಯಾಯಮಂಡಳಿ ತಿರ್ಮಾನದಂತೆ ದಾವಾ ಐಟಂ 5 ರ ಸ್ವತ್ತಿನ ಸ್ವಾದೀನ ವಾದಿ ಬಳಿ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಈ ವಿಚಾರ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ 5 ರಲ್ಲಿ ವಾದಿ ಸ್ವಾದೀನದಲ್ಲಿ ಇದ್ದರು ನಾನು ಸುಳ್ಳು ಸಾಕ್ಷಿ ಹೇಳುತ್ತಿದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಾಲು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಸೀನಿಯರ್ ಸಿ.ಜೆ., ಆನೇಕಲ್.